ರಸ್ತೆ ನಿಯಂತ್ರಣ ರೇಖೆ

2444 (3103) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಸ್ತೆ ನಿಯಂತ್ರಣ ರೇಖೆ ಪ್ರಕಾರ ರಾಷ್ಟ್ರೀಯ ಹೆದ್ದಾರಿ ರಾಜ್ಯ ಹೆದ್ದಾರಿ, ಮೇಜರ್ ಡಿಸ್ಟ್ರಿಕ್ಟ್ ರೋಡ್ (ಎಮ್.ಡಿ.ಆರ್.) ಪಂಚಾಯತ್ ರೋಡ್, ಪುರಸಭಾ ರಸ್ತೆಗಳಿಗೆ ಸಂಬಂಧಿಸಿದಂತೆ ನಿಯಂತ್ರಣ ರೇಖೆಯ ದೂರ ಎಷ್ಟಿರಬೇಕು;

ಆ) ಸದರಿ ರಸ್ತೆಗಳಿಗೆ ನಿಯಂತ್ರಣ ರೇಖೆಯಿಂದ ಇರಬೇಕಾದ ದೂರವನ್ನು ಈಗಾಗಲೇ ಗುರುತಿಸಲಾಗಿದೆಯೆ;

ಇ) ಹಾಗಿದ್ದಲ್ಲಿ, ಸದರಿ ಜಮೀನನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡಿದೆಯೆ;

ಈ) ಜಮೀನು ಕಳೆದುಕೊಳ್ಳುವ ಖಾಸಗಿಯವರಿಗೆ ಪರಿಹಾರ ಧನ ನೀಡಲಾಗುವುದೆ; ಯಾವ ದರದಲ್ಲಿ ಪರಿಹಾರವನ್ನು ನೀಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ರಾಷ್ಟ್ರೀಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ಇತರೆ ಜಿಲ್ಲಾ ರಸ್ತೆ ಹಾಗೂ ಹಳ್ಳಿ ರಸ್ತೆಗಳಿಗೆ ಸಂಬಂಧಿಸಿದಂತೆ ನಿಯಂತ್ರಣ ರೇಖೆಯ ದೂರ ರಸ್ತೆಯ ಮಧ್ಯಭಾಗದಿಂದ 75 ಮೀ ಇರಬೇಕಿದೆ. ಇದು ಪಂಚಾಯತ್ ರಸ್ತೆ ಹಾಗೂ ಪುರಸಭಾ ರಸ್ತೆಗಳಿಗೆ ಅನ್ವಯಿಸುವುದಿಲ್ಲ.

ಆ) ಹೌದು. ಈ ಬಗ್ಗೆ ದಿನಾಂಕ 9.10.1998ರಲ್ಲಿ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಇ) ಇಲ್ಲ.

ಈ) ಜಮೀನನ್ನು ಸ್ವಾಧೀನ ಪಡಿಸಿಕೊಂಡಾಗ ಪರಿಹಾರ ಧನವನ್ನು ನಿಯಮಾವಳಿಯಂತೆ ನೀಡಲಾಗುವುದು.

ಹುಬ್ಬಳ್ಳಿಯಿಂದ ಮಂಟೂರುವರೆಗಿನ ರಸ್ತೆ ದುರಸ್ತಿ

2447 (3094) : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ಕೇರಿಯಿಂದ (ಸೆಟಲ್‌ಮೆಂಟ್) ಮಂಟೂರ ಗ್ರಾಮಕ್ಕೆ ಹೋಗುವ ರಸ್ತೆ ದುರಸ್ತೀಕರಣಕ್ಕಾಗಿ (ಸೆಟಲ್‌ಮೆಂಟ್) ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ;

ಆ) ಹುಬ್ಬಳ್ಳಿ ಸಣ್ಣಕೇರಿಯಿಂದ ಮಂಟೂರ ಗ್ರಾಮದವರೆಗೆ ರಸ್ತೆಯ ಕಾಮಗಾರಿ ನಬಾರ್ಡ್ ಯೋಜನೆಯಲ್ಲಿ ಮಂಜೂರಾಗಿದೆಯೆ;

ಇ) ಸದರಿ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು; ಸದರಿ ರಸ್ತೆಗೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹುಬ್ಬಳ್ಳಿಯಿಂದ ಮಂಟೂರುವರೆಗಿನ ರಸ್ತೆ ಅಭಿವೃದ್ಧಿ ಪ್ರಸ್ತಾವನೆ ಬಂದಿದೆ.

ಆ) ಇಲ್ಲ

ಇ) ಈ ರಸ್ತೆಯನ್ನು ಡಾಂಬರೀಕರಣಗೊಳಿಸಿ ಅಭಿವೃದ್ಧಿಪಡಿಸಲು ಸುಮಾರು 175 ಲಕ್ಷ ರೂ. ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಈ ಕಾಮಗಾರಿಯನ್ನು ನಬಾರ್ಡ್ ಯೋಜನೆಯಡಿ ಕೈಗೊಳ್ಳಲು ಅನುಮೋದನೆ ದೊರೆತ ನಂತರ ಪ್ರಾರಂಭಿಸಲಾಗುವುದು.